ಓ:ಎಸ್:ನಂ.*346/2015*

ಪಿ.ಡಬ್ಲ್ಯೂ- *1*

***ದಿಃ 28-11-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ ಜಿ ಎನ್ ಸಿ ವಕೀಲರಿಂದ***

ಓಂಕಾರಪ್ಪನವರಿಗೂ ಸೇರಿ ಒಟ್ಟು *49* ಜನ ಫಲಾನುಭವಿಗಳಿಗೆ ಪಂಚಾಯ್ತಿಯಿಂದ ಹಕ್ಕು ಪತ್ರವನ್ನು ನೀಡಿರುತ್ತೇವೆ. ಓಂಕಾರಪ್ಪನವರಿಗೆ ತಮ್ಮ ಗ್ರಾಮದಲ್ಲಿ *30* ಗುಂಟೆ ಕೃಷಿ ಜಮೀನು ಇದೆ ಮತ್ತು ಅವರಿಗೆ ವಾಸದ ಮನೆಯು ಸಹ ಇದೆ. ಓಂಕಾರಪ್ಪನವರ ಹೆಸರಿನಲ್ಲಿ ಟ್ರಾಕ್ಟರ್ ಇದೆ. ನನ್ನ ಹೆಸರಿನಲ್ಲಿ ಒಂದು ದ್ವಿಚಕ್ರ ವಾಹನ ಇದೆ. ನಮ್ಮ ತಂದೆಯವರು ದಾವ ಆಸ್ತಿಗೆ ಸಂಬಂಧಪಟ್ಟಂತೆ ಹಕ್ಕುಪತ್ರವನ್ನು ಪಡೆಯುವ ಸಂದರ್ಭದಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಆದಾಯ ಪ್ರಮಾಣ ಪತ್ರವನ್ನು ಪಂಚಾಯ್ತಿಯವರಿಗೆ ಕೊಟ್ಟಿರುವುದಿಲ್ಲ. ಪಂಚಾಯ್ತಿಯವರು ಕೆಲವು ಷರತ್ತುಗಳ ಆಧಾರದ ಮೇಲೆ ಹಕ್ಕು ಪತ್ರ ನೀಡಿರುತ್ತಾರೆಂದರೆ ಸರಿ. ಆ ಷರತ್ತುಗಳ ಅನ್ವಯ ಪಂಚಾಯಿತಿಯವರು ತಮ್ಮ ಕುಟುಂಬದ ಆದಾಯ ಪತ್ರ ಕೊಡಿ ಎಂದು ಕೇಳಿರುತ್ತಾರೆಂದರೆ ಸರಿಯಲ್ಲ. ಇತರೇ ಫಲಾನುಭವಿಗಳು ಸಹ ಗ್ರಾಮ ಪಂಚಾಯಿತಿಗೆ ತಮ್ಮ ಕುಟುಂಬದ ಆದಾಯ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ ಆದ್ದರಿಂದ ಸದರಿ ಹಕ್ಕು ಪತ್ರಗಳು ರದ್ದಾಗಿವೆ ಎಂದರೆ ಸರಿಯಲ್ಲ. ಹಕ್ಕು ಪತ್ರವನ್ನು ಹೊರತುಪಡಿಸಿ ನಾವು ದಾವ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಹಕ್ಕುಪತ್ರದ ಪ್ರಕಾರ ದಾವ ಆಸ್ತಿಗೆ ಸಂಬಂಧಪಟ್ಟಂತೆ ತಮ್ಮ ಹೆಸರಿಗೆ ಖಾತೆ ಆಗಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಗ್ರಾಮ ಪಂಚಾಯಿತಿಯವರು ಹಕ್ಕು ಪತ್ರದ ಆಧಾರದ ಮೇಲೆ ಖಾತೆ ಮಾಡಿಲ್ಲ ಎಂಬುದರ ಬಗ್ಗೆ ತಾವೇನಾದರೂ ಸಕ್ಷಮ ಪ್ರಾಧಿಕಾರದ ಮುಂದೆ ತಾವೇನಾದರೂ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನಮಗೆ ದಾವ ಸ್ವತ್ತಿನ ಮೇಲೆ ಯಾವುದೇ ಹಕ್ಕು, ಹಿತಾಸಕ್ತಿ ಮತ್ತು ಸ್ವಾದೀನ ಇಲ್ಲ ಎಂದರೆ ಸರಿಯಲ್ಲ. ಈಗ ದಾವ ಸ್ವತ್ತು ಪಂಚಾಯಿತಿಯವರ ಸ್ವಾಧೀನಾನುಭವದಲ್ಲಿದೆ ಎಂದರೆ ಸರಿಯಲ್ಲ. *1*ನೇ ಪ್ರತಿವಾದಿಯು ದಾವ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಹಸ್ತಕ್ಷೇಪ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***